**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಪಿ.ಸಿ.ಆರ್ 66/2019**

| | | |
|---|---|---|
| ಹೆಸರು | ವೆಂಕಟೇಶ | ಪಿಡಬ್ಲ್ಯೂ –1 |
| ತಂದೆಯ ಹೆಸರು | ಲೇಟ್ ಗುರುಬಸಪ್ಪ | |
| ವಯಸ್ಸು | 68 ವರ್ಷ | |
| ಉದ್ಯೋಗ | ನಿವೃತ್ತ ಬ್ಯಾಂಕ್ ನೌಕರ | ದಿ: 28.09.2022 |
| ವಾಸ ಸ್ಥಳ | ಬೆಂಗಳೂರು | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಸಾಕ್ಷಿಯ ಪ್ರತಿಜ್ಞಾ ಪೂರ್ವ ಹೇಳಿಕೆಃ**

1 ನೇ ಆರೋಪಿ ನನ್ನ ತಮ್ಮ. ಅದೇ ರೀತಿ 2 ನೇ ಆರೋಪಿ ನನ್ನ ತಮ್ಮನಿಂದ ಜಮೀನು ಖರೀದಿ ಮಾಡಿದ ವ್ಯಕ್ತಿ. ನಮ್ಮ ತಂದೆ ಬಿ.ಗುರುಬಸಪ್ಪನವರು ಗುತ್ತೂರು ಗ್ರಾಮದಲ್ಲಿ ಸರ್ವೆ ನಂಬರ್ 154/4 ರಲ್ಲಿ 2 ಎಕರೆ 1 ಗುಂಟೆ ಜಮೀನನ್ನು ದಿನಾಂಕ 31.01.1976 ರಂದು ಬಸಪ್ಪ ಹಾಗೂ ಯಲ್ಲಪ್ಪ ತಂದೆ ನರಸಪ್ಪ ರವರಿಂದ ರೂ 5,000/– ಗಳಿಗೆ ಖರೀದಿ ಮಾಡಿದ್ದರು. ನಮ್ಮ ತಂದೆಗೆ ನಾವು 7 ಜನ ಮಕ್ಕಳು. ನನ್ನ ತಂದೆ ದಿನಾಂಕ 26.03.1992 ರಂದು ಮೃತ ಪಟ್ಟಿರುತ್ತಾರೆ. ಅವರು ತೀರಿಕೊಂಡ ನಂತರ ಸದರಿ ಜಮೀನನ್ನು ನಮ್ಮ ಎಲ್ಲಾ ಮಕ್ಕಳು ಒಟ್ಟಿಗೆ ಸ್ವಾಧೀನದಲ್ಲಿ ಇದ್ದೆವು. ನಾನು ಬೆಂಗಳೂರಿನಲ್ಲಿ ನೌಕರಿ ಮಾಡಿಕೊಂಡು ವಾಸವಾಗಿದ್ದೆನು.

ನನ್ನ ತಮ್ಮ ಬಿ.ಅಣ್ಣಪ್ಪ ಅಂದರೆ 1 ನೇ ಆರೋಪಿ ನಮಗೆ ಯಾರಿಗೂ ತಿಳಿಸದೇ ತನ್ನ ಹೆಸರಿನಲ್ಲಿ ಒಂದು ಬಿಳಿ ಹಾಳೆಯ ಮೇಲೆ ನನ್ನ ತಂದೆ ದಿನಾಂಕ 25.01.1992 ರಲ್ಲಿ ಆತನ ಹೆಸರಿಗೆ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ ಎಂದು ದಾಖಲೆಯನ್ನು ಸೃಷ್ಟಿಸಿಕೊಂಡು ಅದರ ಆಧಾರದ ಮೇರೆಗೆ ಮೇಲೆ ಹೇಳಿದ ಜಮೀನನ್ನು ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾನೆ. ನಂತರ ದಿನಾಂಕ 25.11.2006 ರಂದು ಸದರಿ ಜಮೀನನ್ನು 2 ನೇ ಆರೋಪಿಗೆ ಮಾರಾಟ ಮಾಡಿರುತ್ತಾನೆ. ಸದರಿ ವಿಚಾರ ನನಗೆ ಸನ್ 2018 ರಲ್ಲಿ ಗೊತ್ತಾಗಿರುತ್ತದೆ. ನಂತರ ನಾನು ಪೋಲಿಸ್ ಠಾಣೆಯಲ್ಲಿ 1 ಮತ್ತು 2 ನೇ ಆರೋಪಿತರ ಮೇಲೆ ದೂರು ಕೊಟ್ಟಿರುತ್ತೇನೆ. ಪೋಲಿಸರು ಆರೋಪಿತರ ಮೇಲೆ ಕ್ರಮ ತೆಗೆದುಕೊಳ್ಳದೇ ಇರುವ ಕಾರಣ ನಾನು ನ್ಯಾಯಾಲಯದಲ್ಲಿ ಖಾಸಗಿ ಪಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ನಂತರ ನ್ಯಾಯಾಲಯವು ಪಿರ್ಯಾದಿಯನ್ನು ಪೋಲಿಸ್ ಠಾಣೆಗೆ ತನಿಖೆ ಮಾಡಲು ಕಳುಹಿಸಿದ್ದು, ಪೋಲಿಸರು ಸರಿಯಾಗಿ ತನಿಖೆ ಮಾಡದೇ ಬಿ –ಅಂತಿಮ ವರದಿಯನ್ನು ಸಲ್ಲಿಸಿರುತ್ತಾರೆ.

1 ನೇ ಆರೋಪಿ ನಮಗೆ ತಿಳಿಸದೇ ನಮ್ಮ ತಂದೆಯ ಆಸ್ತಿಯನ್ನು ನಮ್ಮ ಆರೂ ಜನರಿಗೆ ಕೊಡದೇ ತಾನೊಬ್ಬನೇ ಮೃತ್ಯು ಪತ್ರವನ್ನು ಸೃಷ್ಟಿಸಿಕೊಂಡು 2 ನೇ ಆರೋಪಿಗೆ ಮಾರಾಟ ಮಾಡಿ ನಮಗೆ ಮೋಸ ಮಾಡಿ ನಷ್ಟ ಉಂಟು ಮಾಡಿದ್ದರಿಂದ ಆರೋಪಿರ ವಿರುದ್ಧ ಕಾನೂನು ಕ್ರಮ ಜರುಗಿಸಲು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳುತ್ತೇನೆ.

**ಮರು ವಿಚಾರಣೆಃ** ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹರಿಹರ.